


**ಮಹಿಳೆಗೆ ಇದು ಸಕಾಲ**

'ಗೃಹಕೃತ್ಯಕ್ಕೆ ವೇತನ ಏಕಿಲ್ಲ?' ಸುಮಂಗಲ ಅವರ ಮುಖಪುಟದ ಲೇಖನ ಗಂಭೀರವಾಗಿ ಚಿಂತಿಸಬೇಕಾದ ಪ್ರಶ್ನೆ ಮುಂದಿಟ್ಟಿದೆ. ಯಾರೂ ಚಿಂತಿಸದ ವಿಚಾರವನ್ನು ನ್ಯಾಯಾಲಯ ನೆನಪಿಸಿದೆ. ಗೃಹಿಣಿಯರು ಮನುಷ್ಯರೆಂಬುದು ಅರಿಯಲು ಇದು ಸಕಾಲ.

-ಎಂ.ಆರ್. ಶೋಭಾ ಶೇಖರ್, ದೊಡ್ಡಬಳ್ಳಾಪುರ/ ನರೇಂದ್ರ ಸಿರಕಜೆ, ಮೈಸೂರು/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ಮೊಳಕಾಲ್ಮೂರು ಸುರೇಶ, ಬಳ್ಳಾರಿ/ ಪಿ.ಗೋಕುಲದಾಸ್, ಮಂಗಳೂರು

**ವ್ಯಾಪಾರ ಭಾವ ಬಂದರೆ ನೆಮ್ಮದಿ ಹಾಳು**

ಮನೆ ಮಂದಿಗೆ ಒಪ್ಪುವ, ಅವರ ಮನಸ್ಸಿಗೆ ಖುಷಿ ನೀಡುವ ಮನೋಭಾವ ಮಹಿಳೆಗೆ ಇದ್ದರೆ, ವೇತನದ ನಿರೀಕ್ಷೆ ಇರುವುದಿಲ್ಲ. ಆ ಭಾವನೆ ಮೂಡಿದರೆ ವ್ಯಾಪಾರಿ ಮನೋಭಾವ ಬಂದು ಸಂಸಾರದ ಸಾಮರಸ್ಯ, ನೆಮ್ಮದಿ ಕನಸಿನ ಮಾತೇ ಆಗಿಬಿಡುತ್ತದೆ.

-ವಿಭಾ ಮುರಳೀಧರ್, ತುಮಕೂರು

**ಮಹಿಳೆ ಆದಾಯವೇ ಹೆಚ್ಚು**

ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದಲ್ಲಿ ಸೂತ್ರಧಾರನು ತನ್ನ ಹೆಂಡತಿಯನ್ನು ತ್ರಿವರ್ಗ (ಧರ್ಮ, ಅರ್ಥ, ಕಾಮ) ಸಾಧಕಿ ಎಂದು ಸಂಬೋಧಿಸುತ್ತಾನೆ. ಹೊರಗೆ ದುಡಿಯುವ ಗಂಡಸಿಗೆ ಭಾನುವಾರ ಹಾಗೂ ಇನ್ನಿತರ ಕೆಲವು ರಜೆ ಇರುತ್ತವೆ. ಆದರೆ ಗೃಹಿಣಿಗೆ ರಜೆ ಎಂಬುದೇ ಇಲ್ಲ. ಆದರೆ ಅವಳ ಆದಾಯ ಗಂಡಸಿಗಿಂತಲೂ ಹೆಚ್ಚಿಗೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

-ಟಿ.ಎನ್.ಸರಸ್ವತಿ, ತಿಪಟೂರು



**ಅರ್ಥಪೂರ್ಣ ಕಾರ್ಟೂನ್**

ಪಿ. ಮಹಮದ್‌ರವರ ಪಾಕ್ ಕ್ರಿಕೆಟಿಗರ ಮೋಸದಾಟಕ್ಕೆ ಸಂಬಂಧಿಸಿದ ಕಾರ್ಟೂನ್/ವ್ಯಂಗ್ಯಚಿತ್ರ ಅರ್ಥಗರ್ಭಿತ ವಾಗಿತ್ತು. ಮಹಮದ್‌ರವರ ಎಲ್ಲಾ ವ್ಯಂಗ್ಯಚಿತ್ರಗಳು ಬಹಳ ಭಿನ್ನ ಹಾಗೂ ನೈಜತೆಯನ್ನು ಒಳಗೊಂಡಿರುತ್ತವೆ.

-ಎಂ. ಸರ್ದಾರ್, ಅರಸೀಕೆರೆ

**ಪ್ಲಾಸ್ಟಿಕ್: ವಿವೇಚನೆ**

ಬಿ.ಎನ್. ಭರತ್‌ರ 'ಪ್ಲಾಸ್ಟಿಕ್ ನೋಟು ಬಂದರೆ ಹೇಗೆ?' ಸಂಶೋಧನಾ ಮಾದರಿಯ ಲೇಖನವಾಗಿತ್ತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಅಷ್ಟಪದಿ!**

'ಸಪ್ತಪದಿ ಹೆಜ್ಜೆ ತಪ್ಪಿದಾಗ' (ಆರ್. ಶ್ರೀನಾಗೇಶ್). ಸರಳವಾಗಿ ಹೇಳುವುದಾದರೆ ಆಗ ಸಪ್ತಪದಿ ಹೋಗಿ ದಾಂಪತ್ಯ ಅಷ್ಟಪದಿ (ಆಕ್ಟೋಪಸ್) ಆಗಬಹುದು, ಅಷ್ಟೆ!

-ಸಿ.ಪಿ.ಕೆ., ಮೈಸೂರು

**ಆತ್ಮಾವಲೋಕನ**

ಆತ್ಮಾವಲೋಕನ ಬಹಳ ಮುಖ್ಯ. ಆಗ ಮಾತ್ರವೇ ನಮ್ಮಲ್ಲಿನ ಒಳಿತು–ಕೆಡುಕುಗಳ ದರ್ಶನ.

ವೈನತೇಯರು ತಮ್ಮ ವಿಚಾರಲಹರಿ ಅಂತರ್ಯಾನದ ಮೂಲಕ ನಮ್ಮನ್ನೊಮ್ಮೆ ನಿಜಕ್ಕೂ ಆತ್ಮಾವಲೋಕನ ಮಾಡಿಕೊಳ್ಳುವಂತೆ ಮಾಡಿದ್ದಾರೆ.

-ಶಂಕರೇಗೌಡ ತುಂಬಕೆರೆ, ಮಂಡ್ಯ

**ಅಲ್ಲಿಯೂ ಹಣ ಕೀಳುತ್ತಾರೆ!**

ಒಂಬತ್ತು ವರ್ಷಗಳ ಹಿಂದೆ ಮಿತ್ರನೊಂದಿಗೆ ಅಜ್ಮೀರ್ ದರ್ಗಾಕ್ಕೆ ಭೇಟಿ ನೀಡಿದ್ದೆ. ನಮ್ಮ ಕೆಲವು ದೇವಸ್ಥಾನದ ರೀತಿ (ಉದಾ: ಪಳನಿ ಸುಬ್ರಹ್ಮಣ್ಯ) ಅಲ್ಲಿಯೂ ಹಣ ಕೀಳುತ್ತಿರುವುದು ಕಂಡು ಬಂತು.

-ನೇ.ರಾ.ಕೀ., ಕುಕ್ಕೆಸುಬ್ರಹ್ಮಣ್ಯ

**ನಾನೂ ಹೀಗೇ ಇದ್ದೆ!**

ಎಳೆಯರ ಅಂಗಳದಲ್ಲಿ 'ಅಮ್ಮನಿಗೆ ಪ್ರಶ್ನೆಗಳು' 'ಸ್ಕೂಬಿಯ ಗೆಳೆತನ' ಪದ್ಯಗಳು ಇಷ್ಟವಾದವು.' ನಾನು ಕೂಡಾ ನನ್ನ ಅಮ್ಮನಿಗೆ ಇದೇ ರೀತಿ ಪ್ರಶ್ನೆ ಕೇಳುತ್ತೇನೆ.

-ನಚಿಕೇತ್ ನಾಡಿಗ್, 3ನೇ ತರಗತಿ, ಏನಿಗದಲೆ, ಚಿಂತಾಮಣಿ ತಾಲ್ಲೂಕು

**ಇತರೆ ಬಲ್ಬುಗಳೂ ಅಪಾಯವೇ!**

ರಮಣ್‌ಶೆಟ್ಟಿ ರಂಜಾಳ್ ಅವರು ಅಪಾಯಕಾರಿ 'ಎನರ್ಜಿ ಸೇವರ್' ವಿದ್ಯುದ್ದೀಪಗಳು ಲೇಖನದಲ್ಲಿ ಸಿ.ಎಫ್.ಎಲ್. ಬಲ್ಬುಗಳು ಬಹಳ ಅಪಾಯಕಾರಿ ಎಂದೂ ಹಾಗೂ ಅದು ಅಕಸ್ಮಾತ್ ಒಡೆದರೆ ಸಂಭವಿಸಬಹುದಾದ ಅಪಾಯಗಳನ್ನೂ ವಿವರಿಸಿದ್ದಾರೆ.

ನಾವು ಅನೇಕ ವರ್ಷಗಳಿಂದ ಉಪಯೋಗಿಸುತ್ತಾ ಬಂದಿರುವ 'ಫ್ಲೋರೊಸೆಂಟ್ ಟ್ಯೂಬ್ ಲೈಟ್' (ಎಫ್‌ಟಿಎಲ್)ನಲ್ಲೂ ಪಾದರಸವಿರುತ್ತದೆ. ಅಂತಹ ಟ್ಯೂಬ್ ಒಡೆದಾಗಲೂ (ಸಿಎಫ್‌ಎಲ್)ನಷ್ಟೇ ಅಪಾಯದ ಸಾಧ್ಯತೆ ಇದೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು







ಇದೇನ್ರೀ.. ಹಳೇ ಲೆಕ್ಕದ ಪ್ರಕಾರನೇ.. ತಿಂಗಳ ಖರ್ಚಿಗೆ ಕೊಡ್ತಾ ಇದ್ದೀರಲ್ಲಾ ಮುನ್ನೂರು ಪಟ್ಟು ಹೆಚ್ಚಿಗೆ ಕೊಡ್ರೀ..!




ಹೇಗಿದ್ರೂ ಬುಕ್ಕಿ ಹೇಳಿದ ಥರಾ ನಾವು ಆಡಬೇಕಾಗಿದೆ. ನೀವ್ಯಾಕೆ ಕಷ್ಟಪಟ್ಟು ಆಟ ಕಲಿಸೋ ಕೆಲಸ ಮಾಡ್ತೀರಿ ಸಾರ್..!